**SRI BHAGAWAN MAHAVEER JAIN COLLEGE**

Vishweshwarapuram, Bangalore 560004

**Mock Examination Question Paper-2** (January 2019)

| | | | |
|---|---|---|---|
| **Course:** | II PUC | **Subject:** | Kannada |
| **Max. Marks:** | 100 | **Duration:** | 3:15 hrs. |

**I. ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:–** **1x10=10**

1. ಪೌರುಷ ಪ್ರಣಯಿ ಯಾರು?
2. ಯಾವುದು ಹತ್ತಿ ಉರಿದಡೆ ನಿಲಲುಬಾರದು?
3. ಗಂಡರೋ ನೀವ್ ಭಂಡರೋ ಎಂದು ಕೇಳಿದವರಾರು?
4. ನಿದ್ದೆ ತಿಳಿದು ಎದ್ದದ್ದು ಯಾರು?
5. ಎ.ಆರ್.ಕೃಷ್ಣಶಾಸ್ತ್ರಿಗಳು ಎಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು?
6. ಧಣಿ ಎಂದಿಗೂ ಯಾರನ್ನು ನಂಬುವುದಿಲ್ಲ?
7. ಸಿಕಂದರಾಬಾದ್ನ ಶಾಲಾಬಾಲಕಿ ನೋಡಿದ ಕ್ಷಿಪಣಿ ಯಾವುದು?
8. ಜಬ್ಬಾರ್‌ನ ಸಂಬಳ ಎಷ್ಟು?
9. ಆನೆ ಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?
10. ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ?

**II. ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:–** **4x2=8**

11. ಯಾರಿಗೆ ಷಡ್ರಸಾನ್ನವನಿಕ್ಕಿ ಉಪಯೋಗವಿಲ್ಲ? ಏಕೆ?
12. ತಾನು ಘೋರತರ ವಿಷ ಕುಡಿಯುವುದಾಗಿ ದ್ರೌಪದಿ ಏಕೆ ಹೇಳುತ್ತಾಳೆ?
13. ಶಿಲುಬೆಗೇರಿದ ಯೇಸುವಿನ ದೇಹ ಯಾರಿಗೆ, ಏನನ್ನು ಅನ್ನುವಂತಿದೆ?
14. ಎಣ್ಣೆಯಲ್ಲಿ ನೆನೆದು ಉರಿವ ಬತ್ತಿಯನ್ನು ಯಾವ ಯಾವುದಕ್ಕೆ ಹೋಲಿಸಲಾಗಿದೆ?
15. ಕವಯಿತ್ರಿ ನಗುವ ನಗು ಎಂತಹದು?

**ಆ. ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:–** **3x2=6**

16. ಕನ್ನಡದ ಸಮಸ್ಯೆಗಳು ಎಲ್ಲಿಯವರೆಗೂ ಇದ್ದೇ ಇರುತ್ತವೆ?
17. ಮುಂಜಾನೆ ಚಿನ್ನಮ್ಮ ಯಾವ ಕೆಲಸದಲ್ಲಿ ತೊಡಗಿದ್ದಳು?
18. ಕಲಾಂರವರು ತಾವು ಆತ್ಮಕಥೆ ಬರೆದುದು ಏತಕ್ಕಾಗಿ?
19. ಹಳ್ಳಿಯ ಚಹಾದ ಅಂಗಡಿಯೆಂದರೆ ಹೇಗಿರುತ್ತದೆ?

**ಇ. ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:–** **3x2=6**

20. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?
21. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು?
22. ನಾಯಿಗಳ ಸಂಖ್ಯೆ ನಿಯಂತ್ರಣಕ್ಕೆ ಬಾರದಿರಲು ಖಾನ್ ಸಾಹೇಬ ಕೊಟ್ಟ ಕಾರಣವೇನು?
23. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹಿರಾತು ನೀಡಿದರು?

**III. ಈ ಯಾವುದಾದರೂ ಎರಡು ವಾಕ್ಯಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:–** **2x3=6**

24. ತೊರೆಯೊಳಗಿದ್ದವನು ತೃಷೆಯಾಗಲರಸುವನೆ ಕೆರೆಯುದಕವ
25. ಜ್ಯೋತಿ ನಿನ್ಯಾರ ಹೋಲಾರ
26. ಪಾಪ ಮುದುಕ ದೂರದ ಅಸ್ಸಾಮಿನಲ್ಲಿ

**ಉ. ಯಾವುದಾದರೂ ಒಂದು ವಾಕ್ಯದ ಕುರಿತು ಸಂದರ್ಭ ಸೂಚಿಸಿ. ಸ್ವಾರಸ್ಯ ಬರೆಯಿರಿ:–** **1x3=3**

27. ಅದು ಅವರು ಆವರೆಗೂ ನೋಡಿರದ ಪ್ರಾಣಿ
28. ಸೀತಾಪಹರಣ ಕಥನದೊಳ್ ಬಯಕೆಯೆ?

**ಯಾವುದಾದರೂ ಒಂದು ವಾಕ್ಯದ ಕುರಿತು ಸಂದರ್ಭಸೂಚಿಸಿ ಸ್ವಾರಸ್ಯ ಬರೆಯಿರಿ:–** **1x3=3**

29. ಅದು ಸತ್ರೆ ಸಾಯಲಿ ಬಿಡೋ, ಅದ್ಕೇನು ಮಕ್ಕಾ ಮರಿಯಾ?
30. ಆನೆ ಬೇಲಿ ದಾಟಿ ಹೋಯ್ತು ಸಾರ್.

## ಈ–ವಿಭಾಗ

**IV. ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:–** **3x4=12**

31. ರಾವಣನ ಮನ:ಪರಿವರ್ತನೆಯ ಸಂದರ್ಭವನ್ನು ಕವಿ ಹೇಗೆ ಚಿತ್ರಿಸಿದ್ದಾನೆ? ವಿವರಿಸಿ?
32. ಬಸವಣ್ಣನವರ ವಚನಗಳ ಆಶಯವೇನು?
33. ಯಾವ ಯಾವ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ?
34. ಜನಪದರು ಬಾಳಿ ಬದುಕಿದ ರೀತಿಯನ್ನು ತ್ರಿಪದಿಗಳ ಹಿನ್ನೆಲೆಯಲ್ಲಿ ವಿವರಿಸಿ?

**ಆ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:–** **2x4=8**

35. ಅಂತರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್‌ಪರೈಗೆ ಒದಗಿದ ಸಮಸ್ಯೆಗಳೇನು?
36. ಧಣಿ ಹಾಗೂ ಹೊಳೆಯ ನಡುವಿನ ಸಮರವನ್ನು ಚಿತ್ರಿಸಿ?
37. ಪಟ್ಟಣದ ಚಹಾದಂಗಡಿಗಳು ಹೇಗಿರುತ್ತವೆ?

**ಇ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲಿ ಉತ್ತರಿಸಿ:–**

38. ಪುರಪ್ರಮುಖರ ಮೀಟಿಂಗ್‌ನಲ್ಲಿ ನಡೆದ ವಾಗ್ವಾದವನ್ನು ಸಂಗ್ರಹಿಸಿ?
39. ವೇಲಾಯುಧನ ಸಾವಿನ ಸಂದರ್ಭವನ್ನು ಚಿತ್ರಿಸಿ?
40. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು? ವಿವರಿಸಿ?

## ಉ–ವಿಭಾಗ

**V. ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ**

41. ಕರುಣಿಸುವೊಡೆನಗೆ ದಶಕಂ
ಧರ ಧುರದೊಳ್ ರಘುತನೂಜನಾಯು: ಪ್ರಾಣಂ
ಬರೆಗಂ ಬಾರದಿರೆನುತಂ
ಧರಿತ್ರಿಯೊಳ್ ಮ್ಮೆಯನೊಕ್ಕು ಮೂರ್ಛೆಗೆ ಸಂದಳ್

42. ಯಾವಾಗೋ ಕೋಳಿ ಕೂಗಿಹುದು ಏಳಿ. ತಡವೇಕೆ ಪಾನಕೇಳಿ
ಮೊದಲಾಗಲೀಗ ಅಂಗಡಿಯ ಕದವ ಈ ಕ್ಷಣಕೆ ತೆರೆಯ ಕೇಳಿ
ಜೀವನದ ನದಿಗೆ ಸೆಳವಿಹುದು. ಮರಣ ಬಂದೀತು ಕ್ಷಣವು ಉರುಳಿ
ಹೋದವರು ತಿರುಗಿ ಬಂದಾರೆ, ಅವರು ಬರಲಿಕ್ಕು ಇಲ್ಲ ಮರಳಿ.

## ಭಾಷಾಭ್ಯಾಸ

**VI. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗನುಗುಣವಾಗಿ ಉತ್ತರಿಸಿ:– 6x2=12**

**43. ಈ ಪದಗಳಿಗೆ ಅರ್ಥ ಬರೆಯಿರಿ:–**
1. ತಮ 2. ನಂಜು

**44. ಈ ಪದಗಳ ನಾನಾರ್ಥಗಳನ್ನು ಬರೆಯಿರಿ:–**
1. ಬಟ್ಟೆ 2. ಕವಿ

**45. ಈ ಪದಗಳ ತದ್ಭವ ರೂಪ ಬರೆಯಿರಿ:–**
1. ತ್ಯಾಗ 2. ಶೂನ್ಯ

**46. ಈ ಪದಗಳ ಗುಣವಾಚಕಗಳನ್ನು ಗುರ್ತಿಸಿ:–**
1. ಮಣಆಯಾಸ 2. ಮರಿಮೀನು

**47. ಈ ಪದಗಳಲ್ಲಿನ ವಿಭಕ್ತಿಯನ್ನು ಹೆಸರಿಸಿ:–**
1. ಬೆಳ್ನುಡಿಯೊಳ್ 2. ವಲ್ಲಭನ

**48. ಯಾವುದಾದರೂ ಎರಡು ದ್ವಿರುಕ್ತಿಗಳನ್ನು ಬರೆಯಿರಿ:–**

**49. ಈ ನುಡಿಗಟ್ಟುಗಳನ್ನು ಸ್ವಂತವಾಕ್ಯದಲ್ಲಿ ಬಳಸಿ:–**
1. ದಾರಿದೀಪ 2. ಟೋಪಿಹಾಕು

**ಯಾವುದಾದರೂ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ:– 5x1=5**

50. ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ
51. ಹೆಚ್ಚುತ್ತಿರುವ ವೃದ್ಧಾಶ್ರಮಗಳು

**ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ:– 4x1=4**

52. ನಿಮ್ಮ ಕಾಲೇಜಿನ ವಾರ್ಷಿಕೋತ್ಸವಕ್ಕೆ ನಿಮ್ಮ ಗೆಳೆಯ/ಗೆಳತಿಯನ್ನು ಆಹ್ವಾನಿಸಿ ಪತ್ರ ಬರೆಯಿರಿ?
53. ನಿಮ್ಮ ಬಡಾವಣೆಯ ಸಮರ್ಪಕ ವಿದ್ಯುತ್ ಪೂರೈಕೆಗಾಗಿ ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಗೆ ಪತ್ರ ಬರೆಯಿರಿ.

**ಈ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ:– 4x1=4**

54. ತುಂಬಿದ ಕೊಡ ತುಳುಕುವುದಿಲ್ಲ
55. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

*****